OS No 104/2023
PW-1

ಈ ದಿನ ದಿನಾಂಕಃ 31-01-2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಪಿ ಎನ್ ವಕೀಲರಿಂದಃ**

ದಾವಾಸ್ತಿಯನ್ನು ಅಳತೆ ಮಾಡುವಂತೆ ನಾನು ತಹಶೀಲ್ದಾರ್ ರವರಿಗೆ ಯಾವುದೇ ಅರ್ಜಿಯನ್ನು ಕೊಟ್ಟಿಲ್ಲ. ದಾವಾಸ್ತಿಯಲ್ಲಿ ನಾನು ಸ್ವಾಧೀನದಲ್ಲಿರುವ ಕುರಿತು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರ ಎಂದರೆ ಸ್ವಾಧೀನದಲ್ಲಿ ನಾವೇ ಇದ್ದೆವೆ ಎಂದು ನುಡಿಯುತ್ತಾರೆ. ದಾವಾಸ್ತಿಯನ್ನು ಪ್ರತಿವಾದಿಗೆ ನಾನು ಕರಾರು ಪತ್ರದ ಮೂಲಕ ಮಾರಾಟ ಮಾಡಿದ್ದರು ಸಹ ಅದನ್ನುಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಾನು ಯಾವುದೇ ತಂತಿಬೇಲಿಯನ್ನಾಗಲಿ ,ಅಡಿಕೆ ಗಿಡವನ್ನಾಗಿ ನೆಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.

ಈ ದಿನ ದಿನಾಂಕಃ 12-12-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ  ಶ್ರೀ  ಜಿ ಪಿ ಎನ್   ವಕೀಲರಿಂದಃ**

ನಾನು ನನ್ನ ಸಹಿಯನ್ನು ಇಂಗ್ಲೀಷ್. ಮತ್ತು ಉರ್ದು ಭಾಷೆಯಲ್ಲಿ ಮಾಡುತ್ತೇನೆ. ನನಗೆ 5 ಜನ ಹೆಣ್ಣು ಮಕ್ಕಳು.  ಒಬ್ಬ ಗಂಡು ಮಗ. ನನಗೆ ಸರ್ವೆ ನಂ 92 ರಲ್ಲಿ 1 ಎಕರೆ 10 ಗುಂಟೆ ಜಮೀನು ಇದೆ. ಸದರಿ ಸರ್ವೆ ನಂ 92ರಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವಾಸ್ತಿಯ  ಚೆಕ್ಕುಬಂದಿ ಪೂರ್ವಕ್ಕೆ ಸರ್ವೆ ನಂ 92ರ ಉಳಿದ ಜಮೀನು ಪಶ್ಚಿಮ ಮತ್ತು ಉತ್ತರಕ್ಕೆ ಹಳ್ಳ,  ದಕ್ಷಿಣಕ್ಕೆ ಸರ್ವೆ ನಂ 91ರ ಜಮೀನು. ನಾನು ದಾವಾಸ್ತಿಯಲ್ಲಿ ಮೆಕ್ಕೆಜೋಳ, ರಾಗಿ ಬೆಳೆಯುತ್ತೇನೆ. ಈ ವರ್ಷ ನಾನು ಮೆಕ್ಕೆಜೋಳ ಬೆಳೆದಿದ್ದೆನೆ.  ನಾನು ಸರ್ವೆ ನಂ 92ನ್ನು ಅಳತೆ ಮಾಡುವ ಸಮಯಕ್ಕೆ ಹಾಜರಿದ್ದೆ.  ಸದರಿ ಮೋಜಣಿದಾರರು ಸದರಿ ಸರ್ವೆ ನಂಬರನ್ನು ಅಳತೆ ಮಾಡಿ ಪೋಡುಗಳನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ 15 ದಿನಗಳ ಹಿಂದೆ ಪೋಡು ಮಾಡಿರುತ್ತಾರೆ ಎಂದು ನುಡಿಯುತ್ತಾರೆ,  ಸದರಿ ಸರ್ವೆ ನಂ 92 ರಲ್ಲಿ ನನಗೆ 16 ಜನಕ್ಕೆ ಸಾಗುವಳಿಗಾಗಿ ಜಮೀನು ಕೊಟ್ಟಿರುತ್ತಾರೆ ಎಂದರೆ ಸರಿ.

2. ನನಗೆ ಪ್ರತಿವಾದಿ 8-10 ವರ್ಷಗಳಿಂದ ಗೊತ್ತು. ಪ್ರತಿವಾದಿಯ ತಂದೆ ಬಸವರಾಜಯ್ಯ ಸಹ ಗೊತ್ತು. ಪ್ರತಿವಾದಿ ಯಾವ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.   ನಿಪಿ-1 ರಲ್ಲಿ 15 ವರ್ಷ ಪರಭಾರೆ ಮಾಡದಂತೆ ಷರತ್ತು ಇದೆ ಎಂದರೆ ಸರಿ. ನನಗೆ ನಿಪಿ-1 ನ್ನು 1994 ರಲ್ಲಿ ಕೊಟ್ಟಿರುತ್ತಾರೆ ಎಂದರೆ ಸರಿ.  ನಾನು ಪ್ರತಿವಾದಿಗೆ ದಾವಾಸ್ತಿಯನು ನಾನು,ನನ್ನ ಹೆಂಡತಿ ಮತ್ತು ನನ್ನ ಅಪ್ರಾಪ್ತ ಮಕ್ಕಳಾದ ಕೌಸರ್, ಅಪ್ಸರ್ ಖಾನ್ , ಗುಲ್ಜರ್ ಚಾಂದ್ , ಅಖಿಲಾ ಬಾನು , ಸುಫೀಯಾ ಖಾನಂ ರವರೊಂದಿಗೆ ರೂ.1,10,000/- ಗಳಿಗೆ ದಿಃ03-05-2010ರಂದು ನೊಂದಾಯಿತ ಕ್ರಯದ ಕರಾರುಪತ್ರವನ್ನು ಮಾಡಿಕೊಟ್ಟಿರುತ್ತೆನೆ ಎಂದರೆ ಸರಿಯಲ್ಲ. ನಾನು ಸದರಿ ದಿನಾಂಕದಂದು ಮುಂಗಡವಾಗಿ 55 ಸಾವಿರ ರೂಗಳನ್ನು ಪ್ರತಿವಾದಿಯಿಂದ ಪಡೆದು ಷರಾ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ

ಕರಾರುಪತ್ರಕ್ಕೆ ಸಾಕ್ಷಿದಾರರಾಗಿ ಬಿ ನಾಗೇಂದ್ರಪ್ಪ, ಬುಸ್ಸೇನಹಳ್ಳಿ , ನಮ್ಮ ಊರಿನ ಅಬ್ದುಲ್ ಮಜೀದ್ ರವರು ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆಎಂದರೆ ಸರಿಯಲ್ಲ.ಸದರಿಯವರು ನಮ್ಮ ಊರಿನವರು ಎಂದರೆ ಸರಿ. ನಂತರ ನಾನು ದಿಃ 05-02-2023ರಂದು ಪ್ರತಿವಾದಿಯಿಂದ ಬಾಕಿ ಉಳಿದ ಹಣವಾದ 55 ಸಾವಿರ ರೂ.ಗಳನ್ನು ಪಡೆದು ಒಟ್ಟು 97 ಸಾವಿರ ಹಣವನ್ನು ಪಡೆದು ನಾಗೇಂದ್ರಪ್ಪ ಬಿನ್ ನಂಜಪ್ಪ, ಮತ್ತು ಭೀಮಪ್ಪ ಬಿನ್ ಮುರುಡಪ್ಪನವರ ಸಮಕ್ಷಮ ಸದರಿ ಮೊತ್ತವನ್ನು ಪಡೆದು ಕರಾರುಪತ್ರಕ್ಕೆ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

3. ದಾವಾಸ್ತಿಯಲ್ಲಿ ಸದರಿ ಕರಾರುಪತ್ರದ ನಂತರ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವಾಸ್ತಿಗೆ ಪ್ರತಿವಾದಿ ಸುತ್ತಲೂ ತಂತಿಬೇಲಿಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ 30 ತೆಂಗಿನ ಮರ ಇವೆ ಎಂದರೆ ಸಾಕ್ಷಿ ಸದರಿ ತೆಂಗಿನ ಮರಗಳನ್ನ ನಾನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸರ್ವೆಯರ್ ರವರು ನಾನು ದಾವಾಸ್ತಿಯಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

4. ದಿಃ05-02-2023 ರಂದು ನಾನು ಪ್ರತಿವಾದಿಯಿಂದ ಬಾಕಿ ಹಣವನ್ನು ಪಡೆದು ಷರಾ ಬರೆಸಿ ಕರಾರುಪತ್ರ ಮಾಡಿಸಿಕೊಟ್ಟಿರುವ ವಿಚಾರ ಗೊತ್ತಿದ್ದರು ಸಹ ಪ್ರಸ್ತುತ ದಾವೆಯನ್ನು ಹೂಡಿರುತ್ತೇನೆ ಎಂದರೆ ಸಾಕ್ಷಿ ದಾವಾಸ್ತಿಯನ್ನು ಖರೀದಿಗೆ ಕೊಡು ಎಂದು ಪ್ರತಿವಾದಿ ಕಿರುಕುಳ ಕೊಟ್ಟ ಕಾರಣ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವಾಸ್ತಿಯ ಮೇಲಿನ ಷರತ್ತಿನ ಅವಧಿ ಮುಗಿದ ನಂತರ ಪ್ರತಿವಾದಿಗೆ ಕ್ರಯದ ಕರಾರಪತ್ರವನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇಲ್ಲದೆ ಇದ್ದರು ಸಹ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ನಾನು ಆಂಗ್ಲಬಾಷೆಯಲ್ಲಿ ಸಹಿ ಮಾಡಿರುವ ಕರಾರುಪತ್ರದಲ್ಲಿಯೂ ಸಹ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ಪ್ರತಿವಾದಿ ನನ್ನ ವಿರುದ್ದ ದಾವೆ ಹೂಡಲು ತಯಾರಿದ್ದ ವಿಚಾರವನ್ನು ತಿಳಿದು ನಾನೇ ಮೊದಲಿಗೆ ಆತನ ವಿರುದ್ದ ಪ್ರಸ್ತುತ ದಾವೆ ಹೂಡಿದ್ದೆನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಪ್ರತಿವಾದಿ 30 ತೆಂಗಿನಗಿಡ ಮತ್ತು 400 ಅಡಿಕೆಗಿಡಗಳನ್ನು 2010ರ ನಂತರ ಹಾಕಿದ್ದು, ದಾವಾಸ್ತಿಗೆ ತಂತಿ ಬೇಲಿಯನ್ನುಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯನ್ನು ಕಬಳಿಸುವ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.